# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

## ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಲಹಂಕ ಉಪ ವಿಭಾಗ

## ಚೌಡೇಶ್ವರಿ ವಾರ್ಡ್ ನಂ-02ರಲ್ಲಿ

## ದಿನಾಂಕ: 01-10-2022 ರಂದು ನಡೆದ ವಾರ್ಡ್ ಸಮಿತಿ ಸಭಾ ನಡವಳಿ.

ದಿನಾಂಕ: 01-10-2022 ರಂದು ಬೆಳಗ್ಗೆ 11.00 ಗಂಟೆಗೆ ಬಿ.ಬಿ.ಎಂ.ಪಿ ಯಲಹಂಕ ವಿಭಾಗದ ಕಛೇರಿಯಲ್ಲಿ ವಾರ್ಡ್ ನಂ-02ರ ವಾರ್ಡ್ ಸಮಿತಿಯ ಮಾನ್ಯ ನೊಡೆಲ್ ಅಧಿಕಾರಿಗಳು ಹಾಗೂ ಕಾರ್ಯದರ್ಶಿಗಳು ಜೊತೆ ನೆಡೆದ ವಾರ್ಡ್ ಕಮಟಿ ಸಭೆಯ ನಡವಳಿಗಳು.

| ಕ್ರ.ಸಂ | ಸಭೆಯಲ್ಲಿ ಭಾಗವಹಿಸಿದ ಅಧಿಕಾರಿ ಹೆಸರು | ಪದನಾಮ |
|---|---|---|
| 01 | ಶ್ರೀ.ಕೆ.ಜಿ.ಸುಂದರೇಶ್ | ಸಹಾಯಕ ಕಾರ್ಯಪಾಲಕ ಅಭಿಯಂತರರು (ಯೋಜನೆ) |
| 02 | ಶ್ರೀ.ನರಸಿಂಹಯ್ಯ | ಕಾರ್ಯದರ್ಶಿಗಳು ಮತ್ತು ಸಹಾಯಕ ಅಭಿಯಂತರರು (ವಾರ್ಡ್ ನಂ-02) |
| 03 | ಡಾ11 ಮಂಜುಳ ಎಸ್ | ಆರೋಗ್ಯ ವೈದ್ಯಾಧಿಕಾರಿಗಳು ಯಲಹಂಕ ವಲಯ (ಗೈರು ಹಾಜರಿ) |
| 04 | ಶ್ರೀ.ಕೆ.ಎನ್. ಬಾಬುರೆಡ್ಡಿ | ಸಹಾಯಕ ಅಭಿಯಂತರರು (ವಿದ್ಯುತ್) (ಗೈರು ಹಾಜರಿ) |
| 05 | ಶ್ರೀ.ಅಶೋಕ್ .ಎಂ.ಆರ್ | ಸಹಾಯಕ ಕಂದಾಯ ಅಧಿಕಾರಿಗಳು ಯಲಹಂಕ ಉಪ ವಿಭಾಗ(ಗೈರು ಹಾಜರಿ) |
| 06 | ಶ್ರೀ. ಎನ್. ಶ್ರೀರಾಮ ರೆಡ್ಡಿ | ರೆವಿನ್ಯೂ ಇನ್ಸ್‌ಪೆಕ್ಟರ್ |
| 07 | ಶ್ರೀ. ವಿನಯ ಕುಮಾರ್ | ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) ಗೈರು ಹಾಜರಾಗಿರುತ್ತಾರೆ. |
| 08 | ಶ್ರೀಮತಿ. ಸುನಂದಮ್ಮ | ಹಿರಿಯ ಆರೋಗ್ಯ ಪರಿವೀಕ್ಷಕರು |
| 09 | ಶ್ರೀ.ಕುಮಾರ್ ಸ್ವಾಮಿ | ಜಾನುವಾರ ಅಧಿಕಾರಿಗಳು |
| 10 | ಶ್ರೀಮತಿ. ನಂದಶ್ರೀ. | ಕಿರಿಯ ಆರೋಗ್ಯ ಪರಿವೀಕ್ಷಕರು |
| 11 | ಶ್ರೀ.ರಾಮಲಿಂಗ | ಜಲ ಪರೀವಿಕ್ಷಕರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) |
| 12 | ಶ್ರೀ.ಭೂತಯ್ಯ (ಹೆಚ್.ಸಿ. 10365) | ಹೆಡ್ ಕಾನ್ಸೇಟೆಬಲ್ |
| 13 | ಉದಯ ಕುಮಾರ್ | ಪೊಲಿಸ್ ಸಬ್ ಇನ್ಸ್‌ಪೇಕ್ಟರ್ |
| | **ಬಡಾವಣೆ ಕ್ಷೇಮಾಭಿವೃದಿ ಸಂಘದ ಅಧ್ಯಕ್ಷರು/ಕಾರ್ಯದರ್ಶಿ/ಸದಸ್ಯರು/ಸಾರ್ವಜನಿಕರು** | |
| 01 | ಶ್ರೀ.ಹೇಮರಾಜ್ | ಸ್ಥಳೀಯ ಮುಖಂಡರು |

| | | |
|---|---|---|
| 02 | ಶ್ರೀ. ಅ.ಬ ಶಿವಕುಮಾರ್ | ಸ್ಥಳೀಯ ಮುಖಂಡರು |
| 03 | ಶ್ರೀ.ರಾಮರೆಡ್ಡಿ | ಸ್ಥಳೀಯ ನಿವಾಸಿಗಳು |
| 04 | ಶ್ರೀ.ಎ.ಎಸ್.ರಾಜು | ಸ್ಥಳೀಯ ನಿವಾಸಿಗಳು |
| 05 | ಶ್ರೀ.ಶ್ರೀನಿವಾಸಲು | ಸ್ಥಳೀಯ ನಿವಾಸಿಗಳು |
| 06 | ಶ್ರೀ.ವೆಂಕಟೇಶ್ | ಮಾರುತಿನಗರ |
| 07 | ಹರಿನಾಥ | ಸಾರ್ವಜನಿಕರು |
| 08 | ಶಂಕರ್ ನಾಯಕ್ | ನಾಗರ್ಜುನ ಅಪಾರ್ಟ್‌ಮೆಂಟ್ (ಅಧ್ಯಕ್ಷರು) |
| 09 | ವೇಣುಗೋಪಾಲ | ಕೊಂಡಪ್ಪ ಬಡಾವಣೆ |

ಶ್ರೀ.ನರಸಿಂಹಯ್ಯ ಸಹಾಯಕ ಅಭಿಯಂತರರು ಹಾಗೂ ಕಾರ್ಯದರ್ಶಿಗಳು ವಾರ್ಡ್ ನಂ-02 ರವರು ಸಭೆಗೆ ಹಾಜರಿದ್ದ ನೊಡೆಲ್ ಅಧಿಕಾರಿಗಳು ಹಾಗೂ ಬಾಗವಹಿಸಿದ್ದ ಎಲ್ಲಾ ಅಧಿಕಾರಿಗಳನ್ನು ಮತ್ತು ಸಾರ್ವಜನಿಕರ ಸಭೆಗೆ ಸ್ವಾಗತಿಸುತ್ತಾ ಸಭೆ ಪ್ರಾರಂಭಿಸಲು ನೊಡೆಲ್ ಅಧಿಕಾರಿರವರನ್ನು ಕೋರಲಾಯಿತು.

ಅದರಂತೆ ಈ ಹಿಂದಿನ ಸಭೆಯಲ್ಲಿ ಅಂದರೆ ದಿನಾಂಕ:17-09-2022 ರಂದು ನಡೆದ ಸಭೆಯಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ವಿವರಣೆ ಕೇಳಿದರು. ಹಾಗೂ ವಾರ್ಡ್ ನಂ-02ರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಅಧಿಕಾರಿಗಳಿಗೆ ಕೈಗೊಂಡ ಕ್ರಮದ ಬಗ್ಗೆ ವರದಿ ನೀಡುವಂತೆ ಸಭೆಯಲ್ಲಿ ಸೂಚಿಸಿದರು. ಹಾಗೂ ಈ ಹಿಂದೆ ಕೈಗೊಂಡಿರುವ ಸಭೆಯ ನಡವಳಿಗಳನ್ನು ಸಭೆಯಲ್ಲಿ ವರದಿಯನ್ನು ಒದಲಾಯಿತು.

| ಕ್ರ.ಸಂ | ವಿಷಯ ಸೂಚಿ | ನಿರ್ಣಯ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿ |
|---|---|---|---|
| 01 | ವಾರ್ಡ್ ನಂ-02ರಲ್ಲಿ ಪ್ಲಾಸ್ಟಿಕ್ ಸೀಜ್ ಮಾಡುತ್ತಿಲ್ಲವೆಂದು ಈ ಹಿಂದಿನ ಸಭೆಯಲ್ಲಿ ಅಕ್ಷೇಪಣೆ ವ್ಯಕ್ತಪಡಿಸಲಾಗಿದ್ದು, ದಿನಾಂಕ:17-09-2022 ರಂದು ನಡೆದ ಸಭೆಯಲ್ಲಿ ಮತ್ತೊಮ್ಮೆ ವಿಷಯ ಪ್ರಸ್ತಾಪಿಸಿ ಮುಂದಿನ ಸಬೆಗೆ ವಿವರಗಳೊಂದಿಗೆ ಸಭೆಗೆ ಹಾಜರಾಗುವಂತೆ ಸಭೆಯಲ್ಲಿ ಸಾರ್ವಜನಿಕರು ಕೋರಿದರು | ಸದರಿ ವಿಷಯಕ್ಕೆ ಸಂಬಂದಿಸಿದಂತೆ ಸಭೆಯಲ್ಲಿ ಹಾಜರಿದ್ದ ಶ್ರೀಮತಿ. ಸುನಂದಮ್ಮ ಹಿರಿಯ ಆರೋಗ್ಯ ಪರಿವೀಕ್ಷರರು ಮಾತನಾಡಿ ಈಗಾಗಲೇ ಹಂತ ಹಂತವಾಗಿ ಪ್ಲಾಸ್ಟಿಕ್ ಸೀಜ್ ಮಾಡುತ್ತಿದ್ದು, ಮುಂದಿನ ಸಭೆಗೆ ಪ್ಲಾಸ್ಟಿಕ್ ಸೀಜ್ ಮಾಡಿರುವ ವಿವರಗಳನ್ನು ಸಭೆಗೆ ನೀಡಲಾಗುವುದೆಂದು ನೊಡೆಲ್ ಅಧಿಕಾರಿಗಳಿಗೆ ತಿಳಿಸಿದರು | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ-02. |
| 02 | ಚೌಡೇಶ್ವರಿ ವಾರ್ಡ್ ನಂ-02ರ ವ್ಯಾಪ್ತಿಯಲ್ಲಿರುವ ಈಗಾಗಲೇ ಇರುವ ಬತ್ತಿ ಹೋಗಿರುವ ಬೋರ್‌ವೆಲ್‌ಗಳಲ್ಲಿ ಪಂಪು ಮೋಟಾರ್‌ಗಳನ್ನು ತೆಗೆದು ಬೇರೆ ಕಡೆ ನೀರುವ ಇರುವ ಕಡೆ ಕೊಳವೆ ಭಾವಿಗಳಲ್ಲಿ ಪಂಪು ಮೊಟಾರ್ ಆಳವಡಿಸುತ್ತಿರುವ ಬಗ್ಗೆ ಈ ಹಿಂದಿನ ಸಭೆಯಲ್ಲಿ ಕೋರಿದ್ದು, ದಿನಾಂಕ: 17-09-2022 ರಂದು ನಡೆದ ಸಭೆಯಲ್ಲಿ ಮತ್ತೊಮ್ಮೆ ವಿಷಯ ಪ್ರಸ್ತಾಪಿಸಿ ಬೋರ್‌ವೆಲ್‌ಗಳ ವಿವರಗಳನ್ನು ನೀಡುವಂತೆ ಕೋರಿದರು. | ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸಭೆಯಲ್ಲಿ ಹಾಜರಿದ್ದ ಜಲ ಪರಿವೀಕ್ಷರು ಶ್ರೀ.ರಾಮಲಿಂಗ, ಬಿ.ಡಬ್ಲ್ಯೂಎಸ್.ಎಸ್.ಬಿ ರವರು ಮಾತನಾಡಿ ಸದರಿ ಬೊರ್‌ವೆಲ್‌ಗಳ ವಿವರಗಳನ್ನು ಮುಂದಿನ ಸಭೆಗೆ ಹಾಜರುಪಡಿಸುವುದಾಗಿ ನೊಡೆಲ್ ಅಧಿಕಾರಿಗಳಿಗೆ ತಿಳಿಸಿದರು. | ಜಲ ಪರಿವೀಕ್ಷಕರು ಬಿ.ಡಬ್ಲ್ಯೂಎಸ್.ಎಸ್.ಬಿ |

| | | | |
|---|---|---|---|
| 03 | ಚೌಡೇಶ್ವರಿ ದೇವಸ್ಥಾನದ ಸಮೀಪ ಇರುವ ಬೋರ್‌ವೆಲ್ ಹತ್ತಿರ ಬ್ಲಾಕ್ ಸ್ಪಾಟ್ ಇದ್ದು, ಹಾಗೂ ಈ ಜಾಗದಲ್ಲಿ ಕಸವನ್ನು ಹಾಕದಂತೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸಭೆಯಲ್ಲಿ ಎ.ಎಸ್.ರಾಜುರವರು ಮತ್ತೊಮ್ಮೆ ಸಭೆಗೆ ಕೋರಿದರು. | ಇದಕ್ಕೆ ಸಂಬಂದಿಸಿದಂತೆ ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ಈ ಜಾಗದಲ್ಲಿ ಕಸವನ್ನು ಹಾಕದಂತೆ ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ ಎಂಬುದಾಗಿ ಸಬೆಯಲ್ಲಿ ತಿಳಿಸಿದರು. | ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ –2 |
| 04 | ಪಂಪ್ ಹೌಸ್ ನಲ್ಲಿರುವ ಸಂಪ್‌ಅನ್ನು ಸ್ವಚ್ಛತೆ ಮಾಡಿಲ್ಲವೆಂದು ಸಭೆಯಲ್ಲಿ ಸಾರ್ವಜನಿಕರು ಅಕ್ಷೇಪಣೆ ವ್ಯಕ್ತಪಡಿಸಿದರು. | ಇದಕ್ಕೆ ಸಂಬಂದಿಸಿದಂತೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಸಹಾಯಕ ಅಭಿಯಂತರರಾದ ಶ್ರೀ.ವಿನಯ ಕುಮಾರ್ ರವರು ಈ ಹಿಂದಿನ ಸಭೆಯಲ್ಲಿ ಮಾತನಾಡಿದ್ದು, ಸ್ವಚ್ಛತೆ ಮಾಡುವ ಸಂಬಂಧ ವಿವರಣೆ ನೀಡುವಂತೆ ಕೋರಿ ನೋಡೆಲ್ ಅಧಿಕಾರಿಗಳು ಸಭೆಯಲ್ಲಿ ಮಾತನಾಡಿದರು. | ವಿನಯ ಕುಮಾರ್ ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 05 | ಯಲಹಂಕ ಚೌಡೇಶ್ವರಿ ವಾರ್ಡ್ ನಂ – 02ರ ವ್ಯಾಪ್ತಿಯಲ್ಲಿರುವ ಕೊಂಡಪ್ಪ ಬಡಾವಣೆ 16ನೇ ಅಡ್ಡರಸ್ತೆ, ಮನವರ್ತಿ ತೋಟ, ಜ್ಞಾನ ಭಾರತಿ ಸ್ಕೂಲ್ ಹತ್ತಿರ, ರಸ್ತೆಗೆ ಅಡ್ಡಲಾಗಿ ವಿದ್ಯುತ್ ಕಂಭಗಳಿದ್ದು, ಇದನ್ನು ಸ್ಥಳಾಂತರಿಸಬೇಕೆಂದು ಸಭೆಯಲ್ಲಿ ಶ್ರೀ.ದಾಮೋದರ್ ರವರು ಕೋರಿದರು. | ಇದಕ್ಕೆ ಸಂಬಂದಿಸಿದಂತೆ ಬೇಸ್ಕಾಂ ಅಧಿಕಾರಿಗಳಿಗೆ ತಿಳಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ನೋಡೆಲ್ ಅಧಿಕಾರಿಗಳು ಸಭೆಯಲ್ಲಿ ತಿಳಿಸಿದರು | ಸಹಾಯಕ ಅಭಿಯಂತರರು ಬೇಸ್ಕಾಂ ಯಲಹಂಕ |
| 06 | ಬೋರ್‌ವೆಲ್ ಸ್ಟಾಟರ್ ಬಾಕ್ಸ ಹತ್ತಿರ ವಿದ್ಯುತ್ ತಂತಿಗಳು ನೆತಾಡುತ್ತಿದ್ದು, ವಿದ್ಯುತ್ ಲಿಕೇಜ್ ಉಂಟಾಗಿದ್ದು, ಇದರಿಂದಿ ಈ ಹಿಂದೆ ಒಂದು ಹಸು ಸಹ ಸಾವನ್ನಪಿದ್ದು ಇಲ್ಲಿಯುವರೆಗೆ ಇದರ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಸ್ಥಳೀಯ ನಿವಾಸಿಗಳು ಸಭೆಯಲ್ಲಿ ಅಕ್ಷೇಪಣೆ ವ್ಯಕ್ತಪಡಿಸಿದರು | ಇದಕ್ಕೆ ಸಂಬಂದಿಸಿದಂತೆ ಬೇಸ್ಕಾಂ ಅಧಿಕಾರಿಗಳಿಗೆ ತಿಳಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ನೋಡೆಲ್ ಅಧಿಕಾರಿಗಳು ಸಭೆಯಲ್ಲಿ ತಿಳಿಸಿದರು | ಸಹಾಯಕ ಅಭಿಯಂತರರು ಬೇಸ್ಕಾಂ ಅಧಿಕಾರಿಗಳು |

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಚರ್ಚಿಸಲಾಯಿತು, ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಶ್ರೀ.ನರಸಿಂಹಯ್ಯ
ಸಹಾಯಕ ಅಭಿಯಂತರರು

ಶ್ರೀ.ಕೆ.ಜಿ.ಸುಂದರೇಶ್
ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ
ನೋಡೆಲ್ ಅಧಿಕಾರಿಗಳು ವಾರ್ಡ್ ನಂ–02.

ಪ್ರತಿಯನ್ನು:

1. ಮಾನ್ಯ ಜಂಟಿ ಆಯುಕ್ತರು ಯಲಹಂಕ ವಲಯರವರ ಆಪ್ತ ಶಾಖೆಗೆ ಕಳುಹಿಸಿದೆ.
2. ಮಾನ್ಯ ಮುಖ್ಯ ಅಭಿಯಂತರರು ಯಲಹಂಕ ವಲಯರವರ ಆಪ್ತ ಶಾಖೆಗೆ ಕಳುಹಿಸಿದೆ.
3. ಆರೋಗ್ಯ ವೈದ್ಯಾಧಿಕಾರಿಗಳು ಯಲಹಂಕ ವಲಯರವರಿಗೆ ಕಳುಹಿಸಿದೆ.
4. ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ ಯಲಹಂಕ ವಿಭಾಗ/ವಿದ್ಯುತ್/ರಸ್ತೆ ಮತ್ತು ಮೂಲಭೂತ ಸೌಕಾರ್ಯ/ಯೋಜನೆ/ಕೆರೆಗಳು/ ಯಲಹಂಕ ವಲಯ ಸೂಕ್ತ ಕ್ರಮಕ್ಕಾಗಿ.